ನಟ ಚಂದನ್ ಕುಮಾರ್, 'ಫ್ಲರ್ಟ್' ಚಿತ್ರದ ಮೂಲಕ ನಿರ್ದೇಶನದತ್ತಲೂ ಹೊರಳಿದ್ದಾರೆ. ಇದೇ ನ. 28ಕ್ಕೆ ಸಿನಿಮಾ ಬಿಡುಗಡೆಯಾಗುತ್ತಿದ್ದು, ನಿರ್ದೇಶನದ ಮೊದಲ ಅನುಭವಗಳನ್ನು ಹಂಚಿಕೊಂಡಿದ್ದಾರೆ.

# ಚಂದನವನದಲ್ಲಿ ಚಂದನ್ ಹೊಸ ಹೆಜ್ಜೆ



■ ಸುಮಲತಾ ಎನ್

'ರಾಧಾ ಕಲ್ಯಾಣ', 'ಲಕ್ಷ್ಮೀ ಬಾರಮ್ಮ' ಧಾರಾವಾಹಿ ಸೇರಿದಂತೆ ಕೆಲವು ರಿಯಾಲಿಟಿ ಶೋಗಳಿಂದ ಕಿರುತೆರೆಯಲ್ಲಿ ಚಿರಪರಿಚಿತರಾಗಿದ್ದ ನಟ ಚಂದನ್ ಕುಮಾರ್ ಅವರಿಗೆ ಬೆಳ್ಳಿತೆರೆಯಲ್ಲಿ ನಾಯಕನಾಗಿ ಗುರುತು ತಂದುಕೊಟ್ಟಿದ್ದು 'ಪ್ರೇಮಬರಹ' ಸಿನಿಮಾ. ನಟನೆ ಮಾತ್ರವಲ್ಲದೆ ಸಿನಿಮಾ ನಿರ್ದೇಶನದಲ್ಲಿಯೂ ಪ್ರಯತ್ನ ಮಾಡಬೇಕೆಂಬ ಆಲೋಚನೆ ಸಿನಿರಂಗಕ್ಕೆ ಬಂದ ದಿನದಿಂದಲೂ ಅವರ ಮನದೊಳಗೆ ಗುನುಗುತ್ತಲೇ ಇದ್ದು, ಇದೀಗ ಆ ಆಲೋಚನೆಯನ್ನು ಸಾಕಾರಗೊಳಿಸಿದ್ದಾರೆ.

ನಿರ್ದೇಶನದ ಕನಸು ಹೊತ್ತೇ ಬಣ್ಣದ ಲೋಕದೆಡೆಗೆ ಬಂದಿದ್ದ ಅವರಿಗೆ ಅಚಾನಕ್ಕಾಗಿ ಒದಗಿಬಂದದ್ದು ನಟನಾಗುವ ಅವಕಾಶ. ಧಾರಾವಾಹಿಗಳಲ್ಲಿ ನಟಿಸುತ್ತಾ ವರ್ಷಗಳುರುಳಿ, ಸಿನಿಮಾಗಳಲ್ಲಿಯೂ ಬ್ಯುಸಿಯಾಗಿದ್ದ ಅವರು ಬಹುಕಾಲದಿಂದ ಮನದ ಮೂಲೆಯಲ್ಲಿದ್ದ ಕನಸೊಂದನ್ನು ನನಸಾಗಿಸಿಕೊಂಡಿದ್ದಾರೆ. ತಮ್ಮದೇ ನಿರ್ದೇಶನದಲ್ಲಿ 'ಫ್ಲರ್ಟ್' ಸಿನಿಮಾ ರೂಪಿಸಿದ್ದು, ನಟನಾಗಿಯೂ ತೊಡಗಿಕೊಂಡಿದ್ದಾರೆ.

'ಮೊದಲಿನಿಂದಲೂ ನಿರ್ದೇಶನದ ಬಗ್ಗೆ ಒಲವಿತ್ತು. 2010ರಲ್ಲಿಯೇ ಒಂದು ಧಾರಾವಾಹಿ ಪರಿಕಲ್ಪನೆಯೊಂದಿಗೆ ವಾಹಿನಿಯೊಂದಕ್ಕೆ ಹೋಗಿದ್ದೆ. ಅಲ್ಲಿ ನನ್ನ ನಿರ್ದೇಶನದ ಕೋರಿಕೆಯನ್ನು ಬದಿಗಿಟ್ಟು, ನಟನೆ ಮಾಡಿ ಬನ್ನಿ ಎಂದರು. ನಟನಾಗಿ ನನ್ನನ್ನು ಒಪ್ಪುತ್ತಾರೋ ಇಲ್ಲವೋ ಎಂದುಕೊಂಡಿದ್ದೆ. ಆದರೆ ನನ್ನನ್ನು ಇಷ್ಟಪಟ್ಟರು. ಹಾಗೇ 10–12 ವರ್ಷ ಕಳೆದುಹೋಯಿತು. ಧಾರಾವಾಹಿ ಜೊತೆಜೊತೆಗೆ ಸ್ಕ್ರಿಪ್ಟ್ ಕೆಲಸವನ್ನೂ ಮಾಡುತ್ತಿದ್ದೆ. ಕೆಲವು ಸಿನಿಮಾಗಳಲ್ಲಿಯೂ ನಟಿಸಿದೆ. ಸಿನಿಮಾ ಮುಗಿಯುತ್ತಿದ್ದಂತೆ ಸ್ಕ್ರಿಪ್ಟ್ ಕೆಲಸವನ್ನು ಮತ್ತೆ ಶುರು ಮಾಡಿದೆ' ಎಂದು ಹಿನ್ನೆಲೆಯನ್ನು ತೆರೆದಿಟ್ಟರು.

ತಾವೇ ಕಥೆ ಬರೆದು ಸಂಪೂರ್ಣ ಸ್ಕ್ರಿಪ್ಟ್ ಸಿದ್ಧತೆಯೊಂದಿಗೆ ವರ್ಷದ ಹಿಂದೆ 'ಫ್ಲರ್ಟ್' ಸಿನಿಮಾಗೆ ಚಾಲನೆ ನೀಡಿದ್ದು, ಇದೀಗ ಸಿನಿಮಾ ಬಿಡುಗಡೆ ಹಂತ ತಲುಪಿದೆ. ಸಿನಿಮಾವೊಂದು ಬಿಡುಗಡೆ ಹಂತಕ್ಕೆ ಬಂದಾಗ ಯಾವುದೇ ನಿರ್ದೇಶಕರಿಗೆ ಇರುವಂಥ ಕುತೂಹಲ, ಆತಂಕ ತಮ್ಮಲ್ಲೂ ಇದೆ ಎಂದು ನಗುವ ಚಂದನ್, ಸ್ಕ್ರಿಪ್ಟ್ ತಯಾರಿ ಹಿಂದಿನ ಆಲೋಚನೆಗಳನ್ನು ನೆನಪಿಸಿಕೊಳ್ಳುತ್ತಾರೆ.

'ಸಿನಿಮಾಗೆ ಬಹಳಷ್ಟು ತಯಾರಿ ಮಾಡಿದೆ. ಸ್ಕ್ರೀನ್ ಪ್ಲೇ, ಡೈಲಾಗ್, ಕಥೆ –ಚಿತ್ರಕಥೆ ಒಂದು ಸಂಪೂರ್ಣ ಪ್ಯಾಕೇಜ್ ಅನ್ನು ಚೆನ್ನಾಗಿ ರೂಪಿಸಬೇಕು ಎಂಬುದು ಮನದಲ್ಲಿತ್ತು. ಇದು ಲೂಪ್ ಇರುವ ಕಥೆ. ರಿವರ್ಸ್ ಸ್ಕ್ರೀನ್ ಪ್ಲೇ ಪ್ರಯೋಗ. ಚಿತ್ರೀಕರಣ ಮಾಡಲು ತುಂಬಾ ಸುಲಭ ಆಗುವಂತೆ ಬಹಳಷ್ಟು ಕೆಲಸವನ್ನು ಮುನ್ನವೇ ಮಾಡಿಕೊಂಡೆ. ನಟನೆ– ನಿರ್ದೇಶನ ಎರಡರ ಜವಾಬ್ದಾರಿಯೂ ಇದ್ದುದರಿಂದ ಒತ್ತಡ ಎನಿಸಿತ್ತು. ಆದರೂ ಆಸಕ್ತಿಯಿಂದ ಮಾಡಿದ್ದೇನೆ' ಎಂದು ವಿವರಿಸುತ್ತಾರೆ.

ಸದ್ಯ ವಾಸ್ತವದಲ್ಲಿ ಸಿನಿಮಾರಂಗಕ್ಕಿರುವ ಸವಾಲುಗಳ ಕುರಿತು ಅರಿವಿರುವುದು ಚಂದನ್ ಅವರಿಗೆ ಸಿನಿಮಾ ಹೆಣೆಯುವ ಜವಾಬ್ದಾರಿಯನ್ನೂ ಹೆಚ್ಚಿಸಿದೆಯಂತೆ. ಎಲ್ಲ ಕಡೆಯಿಂದಲೂ ಸ್ಪರ್ಧೆ ಇರುವ ಕಾರಣ, ಜನರನ್ನು ಥಿಯೇಟರ್‌ಗೆ ಕರೆತರಬೇಕಾದರೆ ಕಥೆ ಸುಂದರ ಹಾಗೂ ಆಸಕ್ತಿಕರವಾಗಿ ಇರಬೇಕು ಎಂಬುದನ್ನು ಅವರು ನಂಬುತ್ತಾರೆ.

'ಕಿರುತೆರೆಯಲ್ಲಿಯೂ ಈಗ ಸವಾಲಿದೆ. ಆ ಸಮಯದಲ್ಲಿ ಹಿಟ್ ಆದಂತೆ ಈಗಿನ ಸೀರಿಯಲ್‌ಗಳು ಆಗುತ್ತಿಲ್ಲ. ಸಾಮಾಜಿಕ ಜಾಲತಾಣಗಳು, ಯೂಟ್ಯೂಬ್‌ಗಳ ಪ್ರಭಾವ ಈಗ ಹೆಚ್ಚಾಗಿದೆ. ಮಾಹಿತಿ, ಮನರಂಜನೆ ಕ್ಷೇತ್ರ ವಿಸ್ತಾರವಾಗಿದೆ, ಸ್ಪರ್ಧೆ ಹೆಚ್ಚಿದೆ. ಬಹಳ ಸಿದ್ಧತೆಯಂತೂ ಇರಲೇಬೇಕು. ಕಥೆಗೆ, ಪಾತ್ರಕ್ಕೆ ಹೇಗೆ ಬೇಕೋ ಹಾಗೆ ಮೌಲ್ಡ್ ಆಗಲೇಬೇಕಾಗುತ್ತದೆ. ಏನನ್ನೂ ಉಡಾಫೆಯಲ್ಲಿ ಮಾಡಲು ಸಾಧ್ಯವಿಲ್ಲ' ಎಂದು ವಾಸ್ತವವನ್ನು ತೆರೆದಿಡುತ್ತಾರೆ.

'ಫ್ಲರ್ಟ್' ಸಿನಿಮಾದಿಂದ ಜನರು ಏನನ್ನು ನಿರೀಕ್ಷಿಸಬಹುದು ಎಂಬುದನ್ನು ತಮ್ಮ ಮಾತುಗಳಲ್ಲೇ ತೆರೆದಿಡುವ ಅವರು, ''ಸಿನಿಮಾದಲ್ಲಿ ರಿವರ್ಸ್ ಸ್ಕ್ರೀನ್ ಪ್ಲೇ ಇದೆ. ಜನರು ಎಲ್ಲಿ ಏನನ್ನು ನಿರೀಕ್ಷಿಸುತ್ತಿರುತ್ತಾರೋ ಅದ್ಯಾವುದೂ ಆಗುವುದಿಲ್ಲ, 'ಎಕ್ಸ್‌ಪೆಕ್ಟ್ ದಿ ಅನ್‌ಎಕ್ಸ್‌ಪೆಕ್ಟೆಡ್' ಎಂಬಂತೆ. ಕಥೆ ಬೇರೆಯದೇ ಧಾಟಿಯಲ್ಲಿ ಸಾಗುತ್ತದೆ. ಕಥೆಗೆ ಹಲವು ಪದರಗಳಿವೆ. ಪ್ರಿ ಕ್ಲೈಮ್ಯಾಕ್ಸ್, ಕ್ಲೈಮ್ಯಾಕ್ಸ್ ಆದ ಮೇಲೆ ಸಿನಿಮಾದ ಮೊದಲರ್ಧ ಬೇರೆ ರೀತಿಯಲ್ಲೇ ಕಾಣುತ್ತದೆ. ಆ ಮೂರೂ ದೃಷ್ಟಿಕೋನದಲ್ಲಿ ಸಿನಿಮಾ ಹೆಣೆಯಲಾಗಿದೆ'' ಎನ್ನುತ್ತಾರೆ.

ಮೂರ್ನಾಲ್ಕು ಸಿನಿಮಾ ಅವಕಾಶಗಳು ತಮ್ಮ ಮುಂದಿದ್ದು, ನಟನೆಯೊಂದಿಗೆ ನಿರ್ದೇಶನದಲ್ಲಿಯೂ ಮುಂದುವರೆಯುವುದಾಗಿ ತಿಳಿಸುತ್ತಾರೆ. ■